ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿರುವ ಸದರಿ ಪ್ರಾಣಿ ಸಂಗ್ರಹಾಲಯಕ್ಕೆ ಮೈಸೂರು ಪ್ರಾಣಿ ಸಂಗ್ರಹಾಲಯದಷ್ಟೇ ಮಹತ್ವ ಕೊಟ್ಟು ಒಂಭತ್ತನೇ ಪಂಚವಾರ್ಷಿಕ ಯೋಜನೆ ಅವಧಿಯೊಳಗೆ ಮೈಸೂರು ಪ್ರಾಣಿ ಸಂಗ್ರಹಾಲಯದ ಮಟ್ಟಕ್ಕೆ ತರಲು ಕಾರ್ಯಕ್ರಮ ಹಾಕಿಕೊಳ್ಳುವಿರಾ?

ಶ್ರೀ ಡಿ. ಮಂಜುನಾಥ್ : 1997-98ನೇ ಸಾಲಿನಲ್ಲಿ ಗದಗ ಜಿಲ್ಲೆಯ ಬಿಂಕದಕಟ್ಟೆ ಪ್ರಾಣಿ ಸಂಗ್ರಹಾಲಯಕ್ಕೆ ಖರ್ಚಾಗಿದ್ದು 6,63,000 ರೂಪಾಯಿಗಳಾದರೆ, ಅದರಿಂದ ಉತ್ಪತ್ತಿ ಬರುವುದು 78,282 ರೂಪಾಯಿಗಳು. ಈಗ ಸದರಿ ಪ್ರಾಣಿ ಸಂಗ್ರಹಾಲಯ ಬಹಳ ನಷ್ಟದಲ್ಲಿದ್ದು ಅಗತ್ಯತೆಯ ದೃಷ್ಟಿಯಿಂದ ಸದರಿ ಪ್ರಾಣಿ ಸಂಗ್ರಹಾಲಯ ಇರಬೇಕು. ಅಲ್ಲಿನ ಪ್ರಾಣಿ ಸಂಗ್ರಹಾಲಯಕ್ಕೆ ಪ್ರವೇಶ ದರ ವಯಸ್ಕರಿಗೆ ಮೂರು ರೂಪಾಯಿಗಳಿದ್ದರೆ ಮಕ್ಕಳಿಗೆ ಒಂದು ರೂಪಾಯಿ. ಈ ಪ್ರಾಣಿ ಸಂಗ್ರಹಾಲಯವನ್ನು ಮೈಸೂರು ಪ್ರಾಣಿ ಸಂಗ್ರಹಾಲಯದ ಮಟ್ಟಕ್ಕೆ ತರುವುದು ಕಷ್ಟವಾಗುತ್ತದೆ. ಏಕೆಂದರೆ ಮೈಸೂರು ಪ್ರಾಣಿ ಸಂಗ್ರಹಾಲಯ ನೋಡಿಕೊಳ್ಳಲು ಒಂದು 'ಜೂ ಅಥಾರಿಟಿ' ಮಾಡಿದ್ದು ಅದಕ್ಕೆ ಒಬ್ಬರು ನಿರ್ದೇಶಕರಿರುತ್ತಾರೆ. ಇದು ಮಹಾರಾಜರ ಕಾಲದಿಂದಲೂ ಇದೆ. ಅಲ್ಲಿನ ಪ್ರವೇಶ ದರ ವಯಸ್ಕರಿಗೆ ಎಂಟು ರೂಪಾಯಿಗಳಾದರೆ, ಮಕ್ಕಳಿಗೆ ಅಂದರೆ ಐದರಿಂದ ಹತ್ತು ವರ್ಷದವರಿಗೆ ಎರಡು ರೂಪಾಯಿಗಳಿದ್ದು ಐದು ವರ್ಷಕ್ಕಿಂತಲೂ ಕಡಿಮೆಯಿರುವ ಚಿಕ್ಕ ಮಕ್ಕಳಿಗೆ ಉಚಿತವಾಗಿ ಬಿಡಲಾಗುತ್ತಿದೆ. ಆದುದರಿಂದ, ಬಿಂಕದಕಟ್ಟೆ ಪ್ರಾಣಿ ಸಂಗ್ರಹಾಲಯವನ್ನು ಸ್ವಲ್ಪ ಅಭಿವೃದ್ಧಿಗೊಳಿಸುವುದಕ್ಕೆ ನಾವು ಪ್ರಯತ್ನಿಸುತ್ತೇವೆ.

ಕೊಡಗು ಜಿಲ್ಲೆಯಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳನ್ನು ಮುಚ್ಚುವುದು

204 - ಶ್ರೀ ಡಿ.ಎನ್. ಮಾದಪ್ಪ (ಮಡಿಕೇರಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಇರುವ ಒಟ್ಟು ಸಾರಾಯಿ ಅಂಗಡಿಗಳೆಷ್ಟು ಹಾಗೂ ಇವುಗಳಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳು ಎಷ್ಟು? ಅನಧಿಕೃತ ಸಾರಾಯಿ ಅಂಗಡಿಗಳನ್ನು ಮುಚ್ಚಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) 1997-98ನೇ ಸಾಲಿಗೆ ಕೊಡಗು ಜಿಲ್ಲೆಯಲ್ಲಿ 253 ಸಾರಾಯಿ ಅಂಗಡಿಗಳಿಗೆ ಸನ್ನದುಗಳು ನೀಡಲಾಗಿದೆ. ಇವುಗಳಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳು ಇರುವುದಿಲ್ಲ. ಇಂತಹ ಅನಧಿಕೃತ ಅಂಗಡಿಗಳಿರುವುದು ಗಮನಕ್ಕೆ ಬಂದಾಗ ಕಾನೂನು ಪ್ರಕಾರ ಅವುಗಳನ್ನು ಮುಚ್ಚಲು ಕ್ರಮ ಜರುಗಿಸಲಾಗಿದೆ.

ಶ್ರೀ ಡಿ.ಎಸ್. ಮಾದಪ್ಪ : ಮಾನ್ಯ ಉಪಾಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಅಧಿಕೃತ ಸಾರಾಯಿ ಅಂಗಡಿಗಳು ಎಷ್ಟಿವೆಯೆಂದು ಕೇಳಿರುವುದಕ್ಕೆ ಉತ್ತರವಾಗಿ 253 ಎಂದು, ಮತ್ತು ಅನಧಿಕೃತವಾಗಿ ಯಾವುದೇ ಸಾರಾಯಿ ಅಂಗಡಿಗಳಿರುವುದಿಲ್ಲವೆಂದು ತಿಳಿಸಿದ್ದಾರೆ. ಆದರೆ, ಕೊಡಗು ಜಿಲ್ಲೆಯಲ್ಲಿ ತಿಳಿದಿರುವಂತೆ ಸುಮಾರು ನಾಲ್ಕು ನೂರಕ್ಕಿಂತಲೂ ಹೆಚ್ಚು ಸಾರಾಯಿ ಅಂಗಡಿಗಳಿದ್ದು ಬಹಳಷ್ಟು

ಸಾರಾಯಿ ಪಕ್ಕದ ರಾಜ್ಯವಾದ ಕೇರಳಕ್ಕೆ ಕಳ್ಳ ಸಾಗಾಣಿಕೆಯಾಗುತ್ತಿದೆಯೆಂದು ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ. ಈ ಕುರಿತಂತೆ ಬಹಳಷ್ಟು ಪ್ರಕರಣಗಳನ್ನು ಹಿಡಿದು ವಾಹನಗಳನ್ನು ಸೀಜ್ ಮಾಡಿದ್ದರೂ ಇದಾವುದೂ ಕೂಡ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಾರೆ. ಅನಧಿಕೃತವಾಗಿ ಸಾರಾಯಿ ಕೇರಳಕ್ಕೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು) : (ಉಪ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ಅನಧಿಕೃತ ಸಾರಾಯಿ ಅಂಗಡಿಗಳಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲ. ಸರ್ಕಾರದ ಗಮನಕ್ಕೆ ಬಾರದ ರೀತಿಯಲ್ಲಿ ಕಾಡಿನೊಳಗೋ, ಮನೆಯೊಳಗೋ ಅಥವಾ ಎಲ್ಲಿಯೋ ಕದ್ದು ಕಳ್ಳಭಟ್ಟಿ ತಯಾರಿಸತಕ್ಕಂಥ ಪ್ರಕರಣಗಳು ರಾಜ್ಯಾದ್ಯಂತ ಇರಬಹುದು. ಈ ದಿಸೆಯಯಲ್ಲಿ ಮಡಿಕೇರಿ ಜಿಲ್ಲೆಯಲ್ಲಿ ಸುಮಾರು ಏಳು ಪ್ರಕರಣಗಳನ್ನು ಹಿಡಿದಿದ್ದು, ಇದಕ್ಕಿಂತಲೂ ಹೆಚ್ಚು ಪ್ರಕರಣಗಳಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೆ ಸರ್ಕಾರ ದಾಳಿ ನಡೆಸಿ ಕ್ರಮ ಕೈಗೊಳ್ಳುವುದಕ್ಕೆ ಸಿದ್ಧವಾಗಿದೆ. ಕೇರಳಕ್ಕೆ ಅನಧಿಕೃತವಾಗಿ ಕಳ್ಳಸಾಗಾಣಿಕೆಯಾಗುವುದು ನಿರ್ದಿಷ್ಟವಾಗಿ ಗೊತ್ತಿದ್ದು, ಆ ಕುರಿತ ಮಾಹಿತಿ ಕೊಟ್ಟರೆ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಡಿ.ಎಸ್. ಮಾದಪ್ಪ : ಇದರ ಬಗ್ಗೆ ಪತ್ರಿಕೆಗಳಲ್ಲಿ ಬರುತ್ತಿದೆ, ಕೇರಳಕ್ಕೆ ಅನಧಿಕೃತವಾಗಿ ಕಳ್ಳಸಾಗಾಣಿಕೆಯಾಗುತ್ತಿದೆ, ಈ ಕುರಿತಂತೆ ಸಾವಿರಾರು ರೂಪಾಯಿಗಳ ಬೆಲೆ ಬಾಳುವ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿರಲೇಬೇಕು. ಈ ರೀತಿ ಮುಟ್ಟುಗೋಲು ಹಾಕಿಕೊಂಡಂಥ ವಾಹನಗಳ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ? ಹಾಗೂ ಮುಟ್ಟುಗೋಲು ಹಾಕಿಕೊಂಡ ಸಾರಾಯಿ ಬಗ್ಗೆಯೂ ಏನು ಕ್ರಮ ಜರುಗಿಸಿದ್ದೀರಿ?

ಡಾ|| ಹೆಚ್.ಸಿ. ಮಹದೇವಪ್ಪ : ಈ ಬಗ್ಗೆ ಇಲಾಖೆಗೆ ಮಾಹಿತಿ ಸಿಕ್ಕಿರುವ ಕಡೆಗಳಲ್ಲಿ ದಾಳಿ ನಡೆಸಿ, ಏಳು ಪ್ರಕರಣಗಳನ್ನು ಗುರ್ತಿಸಿ ಸೂಕ್ತ ಕ್ರಮ ಕೈಗೊಂಡಿದ್ದೇವೆ. ಕೇರಳಕ್ಕೆ ಅನಧಿಕೃತವಾಗಿ ಸಾರಾಯಿ ಕಳ್ಳ ಸಾಗಾಣಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ನಿರ್ದಿಷ್ಟವಾಗಿ ಗೊತ್ತಿದ್ದು ಅದನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಡಿ.ಎಸ್. ಮಾದಪ್ಪ : ತಾವು ಏಳು ಪ್ರಕರಣಗಳ ಬಗ್ಗೆ ಏನು ಹೇಳಿದ್ದೀರಿ, ಇವು ನಿಜವಾಗಿಯೂ ಕಣ್ಣೊರೆಸುವಂಥ ಪ್ರಕರಣಗಳಾಗಿವೆ. ಕೊಡಗು ಜಿಲ್ಲೆಯಲ್ಲಿ ಪಕ್ಕದ ರಾಜ್ಯಕ್ಕೆ ಅನಧಿಕೃತವಾಗಿ ಸಾರಾಯಿ ಕಳ್ಳ ಸಾಗಾಣಿಕೆಯಾಗುತ್ತಿರುವುದರಿಂದ ಲಕ್ಷಾಂತರ ರೂಪಾಯಿಗಳಷ್ಟು ಹಣ ಸರ್ಕಾರಕ್ಕೆ ನಷ್ಟವಾಗುತ್ತಿದೆ.

ಶ್ರೀ ವೈಜನಾಥ್ ಪಾಟೀಲ್ : ಪಕ್ಕದ ರಾಜ್ಯಕ್ಕೆ ಸಾರಾಯಿ ಕಳ್ಳ ಸಾಗಾಣಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಸಚಿವರು ಹೇಳುತ್ತಿದ್ದಾರೆ. ಸರ್ಕಾರದ ಗಮನಕ್ಕೆ ಬಂದಂತೆಯೇ ಇವೆಲ್ಲಾ ನಡೆಯುತ್ತಿದೆ. ಈ ಪ್ರಕರಣದಲ್ಲಿ ಸರ್ಕಾರದ ಕೆಲವು ಮಂತ್ರಿಗಳೂ ಸಹ ಸೇರಿದ್ದು, ಬರೀ ಮಡಿಕೇರಿ ಜಿಲ್ಲಾ ಗಡಿಯಲ್ಲಲ್ಲದೆ ರಾಜ್ಯದ ಎಲ್ಲಾ ಗಡಿಗಳಿಂದಲೂ ಕಳ್ಳ ಸಾಗಾಣಿಕೆಯಾಗುತ್ತಿದೆ. ಸರ್ಕಾರದ ಅನುಮತಿ ಇದ್ದೇ ಎಲ್ಲವೂ ನಡೆಯುತ್ತಿದೆ.

ಉಪಾಧ್ಯಕ್ಷರು : ಈಗ ಪ್ರಶ್ನೋತ್ತರ ಮುಗಿಯಿತು.